# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಸಿಡಿ\236\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 08/12/2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸಾರ್ವಜನಿಕ/ ಸರ್ಕಾರಿ ನೌಕರರಾದ ಬೆಂಗಳೂರು ನಗರದ 1) ಕಂದಾಯ ಭವನ, ಸಹಾಯಕ ಆಯುಕ್ತರಾದ ಶ್ರೀ.ಎಲ್.ಸಿ.ನಾಗರಾಜ, 2) ಬೆಂಗಳೂರು ದಕ್ಷಿಣ ತಾಲ್ಲೂಕ್ ಕಛೇರಿಯ ತಹಶೀಲ್ದಾರ್‌ರಾದ ಶ್ರೀ.ಶಿವಕುಮಾರ್, 3) ನಾಡಾ ಕಛೇರಿಯ ರಾಜಸ್ವ ನಿರೀಕ್ಷಕರಾದ ಶ್ರೀ.ರಾಮಚಂದ್ರಯ್ಯ, 4) ಬೇಗೂರು ಹೋಬಳಿ ದೊಡ್ಡತೂಗೂರು ಗ್ರಾಮದ ಗ್ರಾಮ ಲೆಕ್ಕಿಗ ಶ್ರೀ.ಎ.ಸಿ.ಅರುಣ್‌ಕುಮಾರ್ ಮತ್ತು 5) ಬಿಡಿಎ ಭೂ ಸ್ವಾಧೀನ ಸಹಾಯಕ ಆಯುಕ್ತರಾದ ಶ್ರೀ.ನಟೇಶ್ ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ

*******

ಬೆಂಗಳೂರು ಮಲ್ಲೇಶ್ವರಂ ಪೂರ್ವ ಬ್ರಿಗೇಡ್ ಗೇಟ್‌ವೇ ನಂ.ಎಫ್-1401, ಜನಾಧಿಕಾರ ಸಂಘರ್ಷ ಪರಿಷತ್‌ನ ಶ್ರೀ.ಆದರ್ಶ ಆರ್ ಅಯ್ಯರ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಬೆಂಗಳೂರು ನಗರದ 1) ಕಂದಾಯ ಭವನ, ಸಹಾಯಕ ಆಯುಕ್ತರಾದ ಶ್ರೀ.ಎಲ್.ಸಿ.ನಾಗರಾಜ, 2) ಬೆಂಗಳೂರು ದಕ್ಷಿಣ ತಾಲ್ಲೂಕ್ ಕಛೇರಿಯ ತಹಶೀಲ್ದಾರ್‌ರಾದ ಶ್ರೀ.ಶಿವಕುಮಾರ್, 3) ನಾಡಾ ಕಛೇರಿಯ ರಾಜಸ್ವ ನಿರೀಕ್ಷಕರಾದ ಶ್ರೀ.ರಾಮಚಂದ್ರಯ್ಯ, 4) ಬೇಗೂರು ಹೋಬಳಿ ದೊಡ್ಡತೂಗೂರು ಗ್ರಾಮದ ಗ್ರಾಮ ಲೆಕ್ಕಿಗ ಶ್ರೀ.ಎ.ಸಿ.ಅರುಣ್‌ಕುಮಾರ್ ಮತ್ತು 5) ಬಿಡಿಎ ಭೂ ಸ್ವಾಧೀನ ಸಹಾಯಕ ಆಯುಕ್ತರಾದ ಶ್ರೀ.ನಟೇಶ್ (ಇನ್ನು ಮುಂದೆ "1 ರಿಂದ 5ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಬೆಂಗಳೂರು ದಕ್ಷಿಣ ತಾಲ್ಲೂಕ್ ಬೇಗೂರು ಹೋಬಳಿ ದೊಡ್ಡ ತೋಗೂರು ಗ್ರಾಮದ ಸರ್ವೆ ನಂ.105 ವಿಸ್ತೀರ್ಣ 10 ಎಕರೆ 4 ಗುಂಟೆ ಆಸ್ತಿ ಸರ್ಕಾರದ ಜಮೀನಾಗಿದ್ದು, ಸದರಿ ಸ್ವತ್ತಿನ ಮೌಲ್ಯ

N. Anand

ಸುಮಾರು ₹150 ಕೋಟಿಗೂ ಅಧಿಕವಾಗಿದೆ. ಸದರಿ ಜಮೀನನ್ನು ಎದುರುದಾರರು ಖಾಸಗಿ ವ್ಯಕ್ತಿಗಳಿಗೆ ಖಾತಾ ಬದಲಾವಣೆ ಮಾಡಿದ್ದು, ಸದರಿ ಜಮೀನನ್ನು ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ., ಬಿಎಸ್‌ಕೆ 3ನೇ ಹಂತ, ಬೆಂಗಳೂರು–85 ರವರಿಗೆ 2002–03ರಂದು ಬಾಡಿಗೆಗೆ ನೀಡಿದ್ದು, ಸದರಿ ಆಸ್ತಿಯ ಸ್ವಾಧೀನವನ್ನು ಸಹ ವರ್ಗಾವಣೆ ಮಾಡಿದ್ದಾರೆ. ಆ ನಂತರ, ಸದರಿ ಜಮೀನನ್ನು 2007ರಂದು ಬಿಡಿಎ ಗೆ ವರ್ಗಾವಣೆ ಮಾಡಿದ್ದು, ಸದರಿ ಆಸ್ತಿಯನ್ನು ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ ಮತ್ತು ಕೊಳಚೆ ನಿವಾಸಿಗಳಿಗೆ ವಾಸದ ಮನೆ ನಿರ್ಮಿಸುವ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದ್ದು, ಆದರೆ ದಿ:09/09/10ರಂದು ಆ ಪೈಕಿ 2 ಎಕರೆ 20 ಗುಂಟೆ ಜಮೀನನ್ನು 1ನೇ ಎದುರುದಾರರು ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿದ್ದು, ಉಳಿದ 7 ಎಕರೆ 20 ಗುಂಟೆ ಜಮೀನನ್ನು 2 ಮತ್ತು ಇತರೆ ಎದುರುದಾರರು 3ನೇ ವ್ಯಕ್ತಿಗಳಿಗೆ ವರ್ಗಾವಣೆ ಮಾಡಿದ್ದಾರೆ. ಪ್ರಸ್ತುತವಾಗಿ 10 ಎಕರೆ 4 ಗುಂಟೆ ಜಮೀನನ್ನು ಎದುರುದಾರರು ಕಾನೂನುಬಾಹಿರವಾಗಿ ಶ್ರೀ.ಪ್ರಭಾಕರ ರೆಡ್ಡಿ ಎಂಬುವವರಿಗೆ ವರ್ಗಾವಣೆ ಮಾಡಿರುವುದಾಗಿ ಹೇಳಿದ್ದಾರೆ.

3. ದಿನಾಂಕ:11/02/2016ರಂದು ದೂರುದಾರರು ಪತ್ರವನ್ನು ಸಲ್ಲಿಸಿ, 1ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲು ಕೋರಿದ್ದರಿಂದ, 1ನೇ ಎದುರುದಾರರನ್ನು ಕೈಬಿಟ್ಟು, 2 ರಿಂದ 7ನೇ ಎದುರುದಾರರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

> ಸದರಿ ಆಸ್ತಿ ಸರ್ಕಾರದ ಜಮೀನಾಗಿದೆ. ಸದರಿ ಆಸ್ತಿಯನ್ನು ಯಾವುದೇ ಖಾಸಗಿ ವ್ಯಕ್ತಿಗಳಿಗೆ ವರ್ಗಾವಣೆ ಮಾಡಿಲ್ಲ ಮತ್ತು ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ. ರವರಿಗೂ ಸಹ ಗುತ್ತಿಗೆ ಆಧಾರದ ಮೇಲೆ ನೀಡಿಲ್ಲ. ಸದರಿ ಆಸ್ತಿಯ ಎಲ್ಲಾ ದಾಖಲೆಗಳು ಸಹ ಸರ್ಕಾರದ ಹೆಸರಿನಲ್ಲಿ ನಮೂದಾಗಿದೆ. ಸದರಿ ಆಸ್ತಿಯಲ್ಲಿ ಶ್ರೀ.ಪ್ರಭಾಕರ ರೆಡ್ಡಿ ಎಂಬುವವರಿಗೆ ಸ್ವಾಧೀನವನ್ನು ನೀಡಿಲ್ಲ ಮತ್ತು ಸದರಿ ವ್ಯಕ್ತಿಯು ಸದರಿ ಆಸ್ತಿಗೆ ಅಪರಿಚಿತ ವ್ಯಕ್ತಿಯಾಗಿದ್ದಾರೆ. ತಾನು ಯಾವುದೇ ಭೂ ಮಾಫಿಯಾ ರವರ ಜೊತೆ ಹೊಂದಾಣಿಕೆ ಮಾಡಿಕೊಂಡು ದಾಖಲೆಗಳನ್ನು ಸೃಷ್ಟಿಸಿಲ್ಲ. ಸದರಿ ಜಮೀನಿನ ಮೂಲ ಮಂಜೂರಿದಾರರಾದ ಶ್ರೀ.ಗಂಗಪ್ಪ, ಶ್ರೀ.ಕೆ.ಡಿ.ಚಂಗಪ್ಪ ಮತ್ತು ಶ್ರೀ.ಮರಿಯಪ್ಪ ರವರು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರಲ್ಲಿ ರಿಟ್ ಅರ್ಜಿ ಸಂಖ್ಯೆ:59428/2014ರಂತೆ ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ದಿ:18/02/15ರಂದು ಮುಕ್ತಾಯಗೊಂಡಿದ್ದು, ಗೌರವಾನ್ವಿತ ಉಚ್ಛ ನ್ಯಾಯಾಲಯವು ಅರ್ಜಿದಾರರ ಅರ್ಜಿಯನ್ನು ಪುನರ್ ಪರಿಶೀಲನೆ ಮಾಡುವಂತೆ ನಿರ್ದೇಶನ ನೀಡಿದ್ದು, ಅದರಂತೆ ತಹಶೀಲ್ದಾರ್‌ರವರು ಕ್ರಮ ಕೈಗೊಳ್ಳುತ್ತಿರುವ ಸಂದರ್ಭದಲ್ಲಿ ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ. ರವರು ರಿಟ್ ಅರ್ಜಿ ಸಂಖ್ಯೆ:12551/2007ರಂತೆ ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ಸಹ ದಿ:28/07/2008ರಂದು ಮುಕ್ತಾಯಗೊಂಡಿದೆ. ಮೂಲ ಮಂಜೂರಿದಾರರಾದ ಶ್ರೀ.ಗಂಗಪ್ಪ, ಶ್ರೀ.ಕೆ.ಡಿ.ಚಂಗಪ್ಪ ಮತ್ತು ಶ್ರೀ.ಮರಿಯಪ್ಪ ರವರು ಕಂದಾಯ ಮೇಲ್ಮನವಿ ಸಂಖ್ಯೆ:ಆರ್‌ಎ (ಎಸ್) 579/2014–15, ಆರ್‌ಎ(ಎಸ್) 580/2014–15 ಮತ್ತು ಆರ್‌ಎ (ಎಸ್) 581/2014–15ರಂತೆ ಸಲ್ಲಿಸಿದ್ದು, ಸದರಿ

N. Anand

ಮೇಲ್ಮನವಿಗಳಲ್ಲಿ ತಹಶೀಲ್ದಾರ್‌ರವರಿಗೆ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿದ್ದು, ಸದರಿಯವರು ಈವರೆವಿಗೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಸಕ್ಷಮ ಪ್ರಾಧಿಕಾರದಿಂದ ಮಾರ್ಗಸೂಚಿ ಬರದಿರುವ ಕಾರಣ ಯಾವುದೇ ಕ್ರಮ ಕೈಗೊಳ್ಳದೇ ವಿಲೇ ಇಡಲಾಗಿದೆಯೆಂದು ಹೇಳಿದ್ದಾರೆ.

4. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಆಸ್ತಿಯಲ್ಲಿ ಶ್ರೀ.ಮರಿಯಪ್ಪ ಎಂಬುವವರಿಗೆ 4 ಎಕರೆ, ಶ್ರೀ.ಚಂಗಪ್ಪ ಎಂಬುವವರಿಗೆ 1 ಎಕರೆ 20 ಗುಂಟೆ ಮತ್ತು ಶ್ರೀ.ಗಂಗಪ್ಪ ಎಂಬುವವರಿಗೆ 2 ಎಕರೆ ಜಮೀನು 1978–79ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದ್ದು, ಅದರಂತೆ ಖಾತಾ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ್ದು, ಖಾತಾ ಬದಲಾವಣೆ ಮಾಡದ ಕಾರಣ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರಲ್ಲಿ ರಿಟ್ ಅರ್ಜಿ ಸಂಖ್ಯೆ:59428/2014ರಂತೆ ಸಲ್ಲಿಸಿದ್ದು, ನ್ಯಾಯಾಲಯವು ನಿಯಮಾನುಸಾರ ಇತ್ಯರ್ಥ ಪಡಿಸುವಂತೆ ಆದೇಶಿಸಿದೆ. ನಂತರ ಮಂಜೂರಿದಾರರು ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಿ, ದಿ:11/08/2015ರಂದು ಉಪವಿಭಾಗಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದಾರೆ. ಅದರಂತೆ, ಉಭಯ ಪಕ್ಷಗಾರರಿಗೆ ನೋಟೀಸ್ ನೀಡಿ ಮಂಜೂರಾದ ಬಗ್ಗೆ ದಾಖಲೆಗಳನ್ನು ಲಭ್ಯವಿದ್ದು, ಈ ಬಗ್ಗೆ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿ ಸ್ಥಳ ಪರಿಶೀಲನೆ ಮಾಡಿ, ಖಾತಾ ಬದಲಾವಣೆಗೆ ಆದೇಶ ಮಾಡಲಾಗಿದೆ. ಈ ಬಗ್ಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರ ತಡೆಯಾಜ್ಞೆ ನೀಡಿದ್ದು, ಸದರಿ ಮ್ಯುಟೇಷನ್ ರದ್ದುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಅನುಮತಿ ಪಡೆದು ದಿ:06/02/16ರಂದು ಮ್ಯುಟೇಷನ್ ರದ್ದುಪಡಿಸಿ, ಸರ್ಕಾರದ ಹೆಸರಿಗೆ ಖಾತೆ ದಾಖಲು ಮಾಡಲಾಗಿದೆಯೆಂದು ಹೇಳಿದ್ದಾರೆ.

5. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನಿನ ಖಾತಾ ಬದಲಾವಣೆಗೆ ಸಂಬಂಧಪಟ್ಟಂತೆ, ತಾನು ಯಾವುದೇ ನಡವಳಿಗಳನ್ನು ಕೈಗೊಂಡಿಲ್ಲ, ಇದರಲ್ಲಿ ತನ್ನದು ಯಾವುದೇ ಪಾತ್ರವಿಲ್ಲವೆಂದು ಹೇಳಿದ್ದಾರೆ.

6. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನಿಗೆ ಸಂಬಂಧಪಟ್ಟಂತೆ ಮಂಜೂರಿದಾರರಿಗೆ ಖಾತಾ ಬದಲಾವಣೆ ಮಾಡಲು ತಹಶೀಲ್ದಾರ್ ಆದೇಶಿಸಿದ್ದು, ದಿ:21/01/16ರಂದು ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರ ವರದಿಯಂತೆ ಎಂ.ಆರ್ ನಂ.ಐಹೆಚ್ 12/2015–16ರಂತೆ ತಹಶೀಲ್ದಾರ್‌ರವರ ಆದೇಶದ ಮೇರೆಗೆ ಹಕ್ಕು ಬದಲಾವಣೆ ವಹಿಯನ್ನು ಮಾಡಲಾಗಿದೆ. ಈ ಬಗ್ಗೆ ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ. ರವರು

N. Ananda

ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ತಂದಿದ್ದರಿಂದ ಮತ್ತು ಉಪವಿಭಾಗಾಧಿಕಾರಿಗಳ ಆದೇಶದಂತೆ, ಮಂಜೂರಾತಿದಾರರ ಹೆಸರಿಗೆ ಮಾಡಲಾದ ಹಕ್ಕು ಬದಲಾವಣೆ ವಹಿಯನ್ನು ರದ್ದುಪಡಿಸಿ, ಸರ್ಕಾರ ಎಂದು ನಮೂದಿಸಲಾಗಿದೆಯೆಂದು ಹೇಳಿದ್ದಾರೆ.

7. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನಿನಲ್ಲಿ ಮಂಜೂರಾತಿದಾರರ ಹೆಸರಿಗೆ ಖಾತಾ ಬದಲಾವಣೆ ಮಾಡಿದ್ದು, ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ. ರವರು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ತಂದಿದ್ದರಿಂದ ಮತ್ತು ಉಪವಿಭಾಗಾಧಿಕಾರಿಗಳ ಆದೇಶದಂತೆ, ಮಂಜೂರಾತಿದಾರರ ಹೆಸರಿಗೆ ಮಾಡಲಾದ ಹಕ್ಕು ಬದಲಾವಣೆ ವಹಿಯನ್ನು ರದ್ದುಪಡಿಸಿ, ಸರ್ಕಾರ ಎಂದು ನಮೂದಿಸಲಾಗಿದೆಯೆಂದು ಹೇಳಿದ್ದಾರೆ.

8 ಏಳನೇ (7ನೇ) ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

9. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನಲ್ಲಿಯ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

10. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಬೆಂಗಳೂರು ದಕ್ಷಿಣ ತಾಲ್ಲೂಕ್ ಬೇಗೂರು ಹೋಬಳಿ ದೊಡ್ಡ ತೋಗೂರು ಗ್ರಾಮದ ಸರ್ವೆ ನಂ.105ರ 10 ಎಕರೆ 4 ಗುಂಟೆ ಜಮೀನು ಮೂಲತಃ ಸರ್ಕಾರದ ಜಮೀನಾಗಿದ್ದು, ಸದರಿ ಆಸ್ತಿಯು ಸುಮಾರು ₹150 ಕೋಟಿಗೂ ಅಧಿಕ ಬೆಲೆ ಬಾಳುವ ಆಸ್ತಿಯಾಗಿದೆ. ಸದರಿ ಆಸ್ತಿಯಲ್ಲಿ 2002–03ನೇ ಸಾಲಿನಲ್ಲಿ ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ. ರವರಿಗೆ ವರ್ಗಾವಣೆ ಮಾಡಿದ್ದು, ಆ ನಂತರ 2007ನೇ ಸಾಲಿನಲ್ಲಿ ಬಿಡಿಎ ರವರಿಗೆ ಹಸ್ತಾಂತರಿಸಿದ್ದು, ಅದರಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ಕೊಳಚೆ ನಿವಾಸಿಗಳಿಗೆ ಮನೆ ನಿರ್ಮಿಸುವ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿದೆ. ಆ ನಂತರ, ಸದರಿ ಜಮೀನಿನಲ್ಲಿ 7 ಎಕರೆ 20 ಗುಂಟೆ ಜಮೀನನ್ನು 2 ಮತ್ತು ಇತರೆ ಎದುರುದಾರರು ವರ್ಗಾವಣೆ ಮಾಡಿರುವುದು ಕಂಡು ಬಂದಿದೆ. ಸದರಿ ಆಸ್ತಿಯು ಪ್ರಸ್ತುತ ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ., ರವರ ಹೆಸರಿನಲ್ಲಿ ಮತ್ತು ಶ್ರೀ.ಮರಿಯಪ್ಪ, ಶ್ರೀ.ಚಂಗಪ್ಪ ಮತ್ತು ಶ್ರೀ.ಗಂಗಪ್ಪ ರವರ ಹೆಸರಿನಲ್ಲಿರುವುದು ಕಂಡು

ಬಂದಿದೆ. ಆದರೆ, ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ., ರವರ ಹೆಸರಿನಲ್ಲಿ ಯಾವ ಆಧಾರದ ಮೇಲೆ ದಾಖಲೆಗಳು ನಮೂದಾಗಿವೆ ಎಂಬ ಬಗ್ಗೆ ಯಾವುದೇ ಸಕಾರಣಗಳನ್ನು ಎದುರುದಾರರು ನೀಡಿಲ್ಲ. ಸದರಿ ಆಸ್ತಿಯು ಸರ್ಕಾರದ ಆಸ್ತಿಯಾಗಿದ್ದು, ಅದನ್ನು ಸಂರಕ್ಷಿಸುವ ಜವಾಬ್ದಾರಿ ಎದುರುದಾರರದಾಗಿದೆ. ಆದರೆ, ಎದುರುದಾರರು ಸದರಿ ಆಸ್ತಿಯನ್ನು ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ., ರವರ ಹೆಸರಿನಲ್ಲಿ ದಾಖಲಿಸಿ, ಸದರಿಯವರು ಆ ಆಸ್ತಿಯಲ್ಲಿ ಕಟ್ಟಡ ನಿರ್ಮಿಸಲು ಈಗಾಗಲೇ ಕಟ್ಟಡ ಸಾಮಗ್ರಿಗಳನ್ನು ಶೇಖರಣೆ ಮಾಡಿರುವುದು ಕಂಡು ಬಂದಿದೆ. ಸದರಿ ಆಸ್ತಿಯಲ್ಲಿ ಅಂಕುಶ್ ಕೃಷ್ಣ ಎಜುಕೇಷನಲ್ ಟ್ರಸ್ಟ್ ರಿ., ರವರು ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ ಎದುರುದಾರರು ಏನನ್ನೂ ಸಹ ಹೇಳಿಲ್ಲ. ಸದರಿ ಆಸ್ತಿಯಲ್ಲಿ ಕಟ್ಟಡ ನಿರ್ಮಿಸುತ್ತಿರುವ ವಿಚಾರ ಎದುರುದಾರರಿಗೆ ಗೊತ್ತಿದ್ದರೂ ಸಹ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಹಾಗೂ ಎದುರುದಾರರ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2, 3 ಮತ್ತು 5 ರಿಂದ 7ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ದಿನಾಂಕ:11/02/2016ರಂದು ದೂರುದಾರರು ಪತ್ರವನ್ನು ಸಲ್ಲಿಸಿ, 1ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲು ಕೋರಿದ್ದಾರೆ ಹಾಗೂ ಸದರಿ ಅವಧಿಯಲ್ಲಿ 4ನೇ ಎದುರುದಾರರು ಯಾವುದೇ ಖಾತಾ ವರ್ಗಾವಣೆ ಬಗ್ಗೆ ಕ್ರಮ ಕೈಗೊಂಡಿಲ್ಲ, ಆದ್ದರಿಂದ, 1 ಮತ್ತು 4ನೇ ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ.

13. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2, 3 ಮತ್ತು 5 ರಿಂದ 7ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

14. ಅದಲ್ಲದೆ, 2, 3 ಮತ್ತು 5 ರಿಂದ 7ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು

ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Ananda 8/12

**(ನ್ಯಾಯಾಮೂರ್ತಿ ಎನ್ ಆನಂದ)**
**ಉಪಲೋಕಾಯುಕ್ತ–1,**
**ಕರ್ನಾಟಕ ರಾಜ್ಯ.**